**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ ಸಿ ನಂಃ 769/2021**

ಫಿರ್ಯಾದಿಃ ಹೊನ್ನಾವರ ಪೋಲಿಸ್ ಠಾಣೆ, ಹೊನ್ನಾವರ.

**– ವಿರುದ್ಧ –**

ಆರೋಪಿತರುಃ 1. **ಪಾಸ್ಕಲ್ ಸಾವೇರ ಡಯಾಸ,**
ವಯಸ್ಸುಃ 53 ವರ್ಷ, ಉದ್ಯೋಗಃ ವ್ಯಾಪಾರ,
ವಾಸಃ ಕೊಡಾಣಿ, ಹೊನ್ನಾವರ,

2. **ಶರಾನ ತಂದೆ ಪಾಸ್ಕಲ್ ಡಯಾಸ್**,
ವಯಸ್ಸುಃ 18 ವರ್ಷ, ವಿದ್ಯಾರ್ಥಿ,
ವಾಸಃ ಕೊಡಾಣಿ, ಹೊನ್ನಾವರ,

3. **ಶ್ರೀಮತಿ ಫಾತಿಮಾ ಕೋಂ ಪಾಸ್ಕಲ್ ಡಯಾಸ್**,
ವಯಸ್ಸುಃ 45 ವರ್ಷ, ಮನೆವಾರ್ತೆ,
ವಾಸಃ ಕೊಡಾಣಿ, ಹೊನ್ನಾವರ,

**ದೋಷಾರೋಪಣೆ**

ಶ್ರೀ ಚಂದ್ರಶೇಖರ ಈ ಬಣಕಾರ., ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡ ದೋಷರೋಪಣೆಗಳನ್ನ ಹೊರಿಸುತ್ತಿದ್ದೇನೆ.

ನಿಮ್ಮ ಮೇಲೆ ಹೊರಿಸುವ ಅಪಾದನೆ ಏನೆಂದರೆಃ-

ದಿನಾಂಕಃ 26-12-2019 ರಂದು ಮಧ್ಯಾಹ್ನ 03-45 ಗಂಟೆಯ ಸಮಯದಲ್ಲಿ ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯ ಕೊಡಾಣಿಯ ಕ್ರಿಶ್ಚಿಯನ್ ಕೇರಿ ರಸ್ತೆ ಮೇಲೆ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಸರ್ವೆ ನಂಬರ್ 127 ರಲ್ಲಿ ನೀವುಗಳು ನಡೆಸುತ್ತಿದ್ದ ಅಕ್ರಮ ಮರಳು ಸಂಗ್ರಹವನ್ನು ಪರಿಶೀಲಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಕಾರವಾರದಿಂದ ಬಂದಿದ್ದಾಗ ಸದರ ಸ್ಥಳದ ವಾರಸುದಾರರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದರಿಂದ ಅವರನ್ನು ಕರೆದುಕೊಂಡು ಬರಲು ಹೊರಟ ಚಾಸಾ-1/ರವಿ ರುಜಾರ ರೋಡ್ರಗೀಸ್ ರವರು ಚಲಾಯಿಸುತ್ತಿದ್ದ ಮೋಟಾರ ಸೈಕಲ್ ಅಡ್ಡಗಟ್ಟಿ ತಡೆದು, ಅ ಮೂಲಕ ನೀನು **ಭಾರತೀಯ ದಂಡ ಸಂಹಿತೆ ಕಲಂ 341 ಸಹ ಕಲಂ 34** ನೇದರಡಿ ಶಿಕ್ಷಾರ್ಹ ದೋಷರೋಪ ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1 ರವರನ್ನು ಮೋಟಾರ ಸೈಕಲ್ ಮೇಲಿಂದ ಎಳೆದು ಕೈಯಿಂದ ಬೆನ್ನು, ಮುಖದ ಮೇಲೆ ಹೊಡೆದು, ಎದೆಯ ಮೇಲೆ ಪರಚಿ ಸಾದಾ ಸ್ವರೂಪದ ಗಾಯ ಪಡಿಸಿ, ಆ ಮೂಲಕ ನೀವು **ಭಾರತೀಯ**

**ದಂಡ ಸಂಹಿತೆ ಕಲಂ 323 ಸಹ ಕಲಂ 34** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ 1 ನೇ ಆರೋಪಿತನಾದ ನೀನು ಚಾಸಾ–1 ರವರನ್ನು ಉದ್ದೇಶಿಸಿ ನೀನು ಹಿಂದೆ ರಸ್ತೆ ನಿರ್ಮಾಣ ಸಂದರ್ಭದಲ್ಲಿ ಆದ ಗಲಾಟೆಯಲ್ಲಿ ನೀನು ಬಚಾವಾಗಿದ್ದಿ ಇಂದು ಸಹ ತಪ್ಪಿಸಿಕೊಂಡೆ ಆದರೆ ನಿನ್ನನ್ನು ಬಿಡುವುದಿಲ್ಲ. ಈ ಘಟನೆಯ ಬಗ್ಗೆ ಪೋಲೀಸರಿಗೆ ತಿಳಿಸಿದರೆ ಕೊಂದು ಹಾಕುತ್ತೇನೆ ಅಂತಾ ಜೀವ ಬೆದರಿಕೆ ಹಾಕಿ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 506 ಸಹ ಕಲಂ 34** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪುನಃ ದಿನಾಂಕಃ 27–12–2019 ರಂದು ಸಂಜೆ ಸಮಯದಲ್ಲಿ ಆರೋಪಿತರಾದ ನೀವುಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ–1 ರವರನ್ನು ಪುನಃ ಅಡ್ಡಗಟ್ಟಿ ರಂಡೆಪುತ್ತಾ ತುಕ್ ಮಾತ್ರ ಸೋಡ್ನಾ ಖಾಂಡುನ ಉಡೈತಾ ಅಂತಾ ಅವಾಚ್ಯ ಶಬ್ದಗಳಿಂದ ನಿಂದಿಸಿ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆ ಕಲಂ 504 ಸಹ ಕಲಂ 34** ನೇದರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ

ಸಹಿ ಇದೆ

**ದಿನಾಂಕಃ** 07–12–2022

(**ಚಂದ್ರಶೇಖರ ಈ ಬಣಕಾರ**).,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.

**ಆರೋಪಿ ನಂಬರಃ 1. ಪಾಸ್ಕಲ್ ಸಾವೇರ ಡಯಾಸ,**

ಪ್ರಶ್ನೆ 1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳು ಕೇಳಿದಿರಾ? ಅದು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ

(ಸದರಿ ಹೇಳಿಕೆಯನ್ನು ನನ್ನ ಸಮಕ್ಷಮ ಅರ್ಥವಾಗುವ ಭಾಷ್ಷೆಯಲ್ಲಿ ಓದಿ ಹೇಳಿದ್ದು ಆರೋಪಿತನು ನ್ಯಾಯಾಲಯದ ಮುಂದೆ ನೀಡಿದ ವಿಚಾರಣೆಗಳು ಸರಿ ಇರುತ್ತವೆ ಅಂತಾ ಈ ಮೂಲಕ ಪ್ರಮಾಣಿಕರಿಸಲಾಗಿದೆ)

ಸಹಿ ಇದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.**

**ಆರೋಪಿ ನಂಬರಃ1**

**ಆರೋಪಿ ನಂಬರಃ 2. ಶರಾನ ತಂದೆ ಪಾಸ್ಕಲ್ ಡಯಾಸ್,**

ಪ್ರಶ್ನೆ 1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳು ಕೇಳಿದಿರಾ? ಅದು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ

(ಸದರಿ ಹೇಳಿಕೆಯನ್ನು ನನ್ನ ಸಮಕ್ಷಮ ಅರ್ಥವಾಗುವ ಭಾಷ್ಷೆಯಲ್ಲಿ ಓದಿ ಹೇಳಿದ್ದು ಆರೋಪಿತನು ನ್ಯಾಯಾಲಯದ ಮುಂದೆ ನೀಡಿದ ವಿಚಾರಣೆಗಳು ಸರಿ ಇರುತ್ತವೆ ಅಂತಾ ಈ ಮೂಲಕ ಪ್ರಮಾಣಿಕರಿಸಲಾಗಿದೆ)

ಸಹಿ ಇದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.**

**ಆರೋಪಿ ನಂಬರಃ2**

**ಆರೋಪಿ ನಂಬರಃ 3. ಶ್ರೀಮತಿ ಫಾತಿಮಾ ಕೋಂ ಪಾಸ್ಕಲ್ ಡಯಾಸ್,**

ಪ್ರಶ್ನೆ 1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳು ಕೇಳಿದಿರಾ? ಅದು ನಿಮಗೆ ತಿಳಿಯಿತೆ?
ಉತ್ತರಃ

ಪ್ರಶ್ನೆಃ 2. ನೀವು ಸದ್ರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆ?
ಉತ್ತರಃ

(ಸದರಿ ಹೇಳಿಕೆಯನ್ನು ನನ್ನ ಸಮಕ್ಷಮ ಅರ್ಥವಾಗುವ ಭಾಷ್ಯೆಯಲ್ಲಿ ಓದಿ ಹೇಳಿದ್ದು ಆರೋಪಿತನು ನ್ಯಾಯಾಲಯದ ಮುಂದೆ ನೀಡಿದ ವಿಚಾರಣೆಗಳು ಸರಿ ಇರುತ್ತವೆ ಅಂತಾ ಈ ಮೂಲಕ ಪ್ರಮಾಣಿಕರಿಸಲಾಗಿದೆ)

ಸಹಿ ಇದೆ
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.**

**ಆರೋಪಿ ನಂಬರಃ3**